
ಮಲಗಿರುವ ವರಸೆಯನ್ನು ನೋಡಿದ ನರಿಗೆ ಆಶ್ಚರ್ಯವಾಯಿತು. ಎಷ್ಟೇ ಆಗಲಿ ಅದು ಚಾಣಾಕ್ಷ ನರಿಯಲ್ಲವೇ? ಅದರ ತಲೆ ಚುರುಕುತನದಿಂದ ಯೋಚಿಸತೊಡಗಿತು. 'ಮರಣಂ ದೃಷ್ಟಾ' ಈತ ಈ ರೀತಿ ಸತ್ತಂತೆ ಬಿದ್ದಿರುವುದು ಯಾಕೆ? 'ಹಸ್ತೇ ದಂಡಕ ಪೀಯೋ' ಅಂದರೆ ಒಂದು ಕೈಯಲ್ಲಿ ಮೊಸರನ್ನ, ಇನ್ನೊಂದು ಕೈಯಲ್ಲಿ ದೊಣ್ಣೆ... 'ಗ್ರಾಮೇ ಗಳಗಳನ್ನಾಷ್ಟಿ' ಅಂದರೆ ಈತ ನಿಜವಾಗಿಯೂ ಸತ್ತಿದ್ದರೆ ಈ ಗ್ರಾಮದಲ್ಲಿರುವ ಜನರಲ್ಲಿ ಒಬ್ಬರಾದರೂ ಬಂದು ದುಃಖಿಸಬೇಕಿತ್ತು. ಆದರೆ, ಇಲ್ಲಿ ಒಂದು ನರಪಿಳ್ಳೆಯೂ ಕಾಣಿಸುತ್ತಿಲ್ಲ. ಅಂದರೆ ಇವನು ನಿಜವಾಗಿಯೂ ಸತ್ತಿಲ್ಲ, ಬದುಕಿದ್ದಾನೆ. ಸತ್ತಂತೆ ನಟಿಸುತ್ತ ಮಲಗಿದ್ದಾನೆ, ಅಷ್ಟೆ. ನನ್ನನ್ನು ಹಿಡಿಯುವುದಕ್ಕೆ ಇವನು ಮಾಡಿರುವ ಉಪಾಯ ಇದು. 'ಶೀಘ್ರಬುದ್ಧಿ ಪಲಾಯನ' ಇನ್ನೂ ನಾನು ಇಲ್ಲೇ ಇದ್ದರೆ ಇವನ ಕೈಗೆ ಸಿಕ್ಕಿಬೀಳುವುದು ಖಂಡಿತ ಎಂದು ಯೋಚಿಸಿದ ನರಿ ಒಂದು ಕ್ಷಣವೂ ತಡಮಾಡದೆ ಅಲ್ಲಿಂದ ಓಡಿಹೋಗಿ ತನ್ನ ಪ್ರಾಣವನ್ನು ಉಳಿಸಿಕೊಂಡಿತು.

# ಪಾರಿವಾಳ



● **ಶ್ರೀಧರ ಕಾಡ್ಲೂರು**

ಪಾರಿವಾಳ ಪಾರಿವಾಳ
ನಂಗೆ ನೀನು ಇಷ್ಟ ಬಹಳ
ಕುಕ್ಕಿ ತಿನ್ನು ಎಲ್ಲ ಕಾಳ
ಪಟಪಟ ಬಡಿ ರೆಕ್ಕೆಗಳ

ಎಷ್ಟು ಚಂದ ನಿಮ್ಮ ಹಿಡಿದು
ಗಾಳಿಯಲ್ಲಿ ತೂರುವುದು
ನಿಮ್ಮ ಗುಂಪ ಮಧ್ಯೆ ಓಡಿ
ಒಟ್ಟೊಟ್ಟಿಗೆ ಹಾರಿಸುವುದು

ಬೂದು, ಕಂದು, ಕಪ್ಪು, ಬಿಳಿ
ವಿವಿಧ ಬಣ್ಣ ಉಂಟು ನಿಮ್ಮ ಬಳಿ
ಒಟ್ಟೊಟ್ಟಿಗೆ ಹಾರುತೀರಿ
ನೋಡೋ ಕಣ್ಣಿಗೆ ಬೆರಗು

ಗಂಟಲಲ್ಲಿ ಏನು ಉಂಟು
ಗುಕ್ ಗುಟುಕು ಹೇಗೆ ಬಂತು?
ಮೊಟ್ಟೆಯಿಂದ ಬಂದ ಮರಿ
ಹುಳುಗಳನ್ನು ಹೇಗೆ ತಿಂತು?

ಸಂಜೆವರೆಗೂ ಸುತ್ತಿ ಸುತ್ತಿ
ರೆಕ್ಕೆ ಬಡಿದು ಸುಸ್ತು ಆಗಿ
ಹದ್ದು ಇರುವ ಸದ್ದು ಉಂಟು
ಬೇಗ ಓಡಿ ಗೂಡು ಸೇರಿ